2019 ಕ.ತೀ.ವ 1032

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಚ್.ಜಿ. ರಮೇಶ್
ಮತ್ತು
ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಜಿ. ನರೇಂದರ್

**ಮೊಹಮ್ಮದ್ ಅಜೀಜ್ ಅಹ್ಮದ್‌ಖಾನ್ –ವಿರುದ್ಧ– ಜಿಲ್ಲಾಧಿಕಾರಿ, ಕೊಪ್ಪಳ ಮತ್ತು ಇತರರು***

ನ್ಯಾಯಾಂಗ ನಿಂದನೆ ಅಧಿನಿಯಮ, 1971 – ಪ್ರಕರಣ 20

ನ್ಯಾಯಾಂಗ ನಿಂದನೆಯ ಆರೋಪಗಳ ಕುರಿತು ವಿಚಾರಣೆಗೆ ಕಾಲಪರಿಮಿತಿ ಮಿತಿ ಕುರಿತು ಪ್ರಕರಣ 20 ಮತ್ತು ಭಾರತ ಸಂವಿಧಾನದ 215ನೇ ಅನುಚ್ಛೇದದ ಅಡಿಯ ಕಾನೂನಿನ ಅಂಶ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಪಲ್ಲವ್ ಸೇಠ್ –ವಿರುದ್ಧ– ಕಸ್ಟೋಡಿಯನ್ (2001) 7 ಎಸ್‌ಸಿಸಿ 549ನೇ ಪ್ರಕರಣದಲ್ಲಿ ನ್ಯಾಯಾಂಗ ನಿಂದನೆ ಅಧಿನಿಯಮ, 1971ರ 20ನೇ ಪ್ರಕರಣದ ಅಡಿಯ ಕಾನೂನನ್ನು ಕುರಿತು ಸೂಕ್ತವಾದ ನಿರ್ದೇಶನವನ್ನು ನೀಡುತ್ತಾ ನ್ಯಾಯಾಂಗ ನಿಂದನೆಯ ಪ್ರಕರಣವನ್ನು ನ್ಯಾಯಾಂಗ ನಿಂದನೆ ಆದ ಘಟನೆಯಿಂದ ಒಂದು ವರ್ಷದ ಒಳಗೆ ಮಾತ್ರ ಪ್ರಕರಣವನ್ನು ಪ್ರಾರಂಭಿಸಬೇಕು ನಂತರ ಅದು 20ನೇ ಪ್ರಕರಣದ ಕಾಲಪರಿಮಿತಿ ಅಡಿ ತಿರಸ್ಕರಿಸಬಹುದು ಎಂದು ವಿಶ್ಲೇಷಿಸಿ ಪ್ರಸ್ತುತ ನ್ಯಾಯಾಂಗ ನಿಂದನೆ ಪ್ರಕರಣವನ್ನು ತಿರಸ್ಕರಿಸಿದೆ.

*ಸಿ.ಸಿ.ಸಿ. ಸಂಖ್ಯೆ: 100411/2015 (ಸಿವಿಲ್), ದಿನಾಂಕ 17ನೇ ಮಾರ್ಚ್, 2016.

| ***ಉಲ್ಲೇಖಿಸಲಾದ ಮೊಕದ್ದಮೆಗಳು*** | ***ಪ್ಯಾರಾದಲ್ಲಿ*** |
|---|---|
| *1. ಐಎಲ್ಆರ್ 1990 ಕೆಎಆರ್ 4355 ಮೆ: ಎ.ವಿ. ಕೌದಿ ಮತ್ತು ಕಂ. –ವಿರುದ್ಧ– ಆರ್.ವಿ. ಲಕ್ಷ್ಮೀದೇವಮ್ಮ* | *(ತಳ್ಳಿ) 1* |
| *2. (2001) 7 ಎಸ್‌ಸಿಸಿ 549 ಪಲ್ಲವ್ ಶೇತ್ –ವಿರುದ್ಧ– ಕಸ್ಟೋಡಿಯನ್ ಮತ್ತು ಇತರರು* | *(ಉಲ್ಲೇ) 1* |

ಅರ್ಜಿದಾರರ ಪರ: ಶ್ರೀ ಪಿ.ಜಿ. ಮೊಗಳಿ, ವಕೀಲರು.
2ನೇ ಪ್ರತ್ಯರ್ಜಿದಾರರ ಪರ: ಶ್ರೀ ಆರ್.ಕೆ. ಕುಲಕರ್ಣಿ, ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಎಚ್.ಜಿ. ರಮೇಶ್ (ಮೌಖಿಕ):**

***ಮೆ॥ ಎ.ವಿ. ಕೌದಿ ಮತ್ತು ಕಂಪನಿ –ವಿರುದ್ಧ– ಆರ್.ವಿ. ಲಕ್ಷ್ಮೀದೇವಮ್ಮ***[1] ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ಪೂರ್ಣ ಪೀಠವು ಹೇಳಿದ ಕಾನೂನನ್ನು ***ಪಲ್ಲವ್ ಸೇಠ್ –ವಿರುದ್ಧ– ಅಭಿರಕ್ಷಕ***[2] ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಮಾನವು ಇಂಗಿತವಾಗಿ ರದ್ದುಗೊಳಿಸಿದೆಯೆ?

ಇದು, ಈ ಮೊಕದ್ದಮೆಯಲ್ಲಿ ನಿರ್ಧರಿಸಲು ಎದುರಾದ ಪ್ರಶ್ನೆಯಾಗಿದ್ದು ಇದಕ್ಕೆ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

---

1. ಐಎಲ್ಆರ್ 1990 ಕೆಎಆರ್ 4355
2. (2001) 7 ಎಸ್.ಸಿ.ಸಿ. 549

**2**. 2012ರ ರಿಟ್ ಅರ್ಜಿ ಸಂಖ್ಯೆಗಳು: 65373–378ರಲ್ಲಿ ಹೊರಡಿಸಲಾದ ದಿನಾಂಕ: 11.10.2012ರ ಆದೇಶವನ್ನು ಪಾಲಿಸದೆ ಇರುವುದನ್ನು ಈ ನ್ಯಾಯಾಲಯ ನಿಂದನೆ ಅರ್ಜಿಯಲ್ಲಿ ದೂರಲಾಗಿದೆ. ಇಡೀ ಆದೇಶವನ್ನು ಈ ಕೆಳಗಿನಂತೆ ಓದಲಾಗಿದೆ:

> "ಅರ್ಜಿದಾರರ ಕಟ್ಟಡಗಳು ಯಾವುವಾದರೂ ಇದ್ದರೆ, ಅವುಗಳನ್ನು ಕೆಡಹುವ ಕಾರ್ಯವನ್ನು ಕಾನೂನಿನ ಪ್ರಕಾರವಲ್ಲದೆ ಬೇರೆ ಯಾವುದೇ ರೀತಿಯಲ್ಲಿ ಮಾಡಬಾರದು; ಅಲ್ಲದೆ ಈ ಅರ್ಜಿಗಳಲ್ಲಿ ಪರಿಗಣಿಸಲು ಮತ್ತೇನೂ ಉಳಿದಿಲ್ಲ ಮತ್ತು ತದನುಸಾರವಾಗಿ ಅರ್ಜಿಗಳನ್ನು ವಿಲೆ ಮಾಡಲಾಗಿದೆ ಎಂದು ಪ್ರತಿವಾದಿ ಸಂಖ್ಯೆ: 3 ಇವರ ಪರ ಮಾನ್ಯ ನ್ಯಾಯವಾದಿಗಳಾದ ಶ್ರೀ ಶರಣಬಸವ ಅವರು ನಿವೇದನೆಯನ್ನು ದಾಖಲಿಸಿರುತ್ತಾರೆ."

**3**. ದಿನಾಂಕ: 09.03.2016ರಂದು ಈ ನ್ಯಾಯಾಲಯ ಈ ಕೆಳಗಿನ ಆದೇಶವನ್ನು ಹೊರಡಿಸಿದೆ:

> "ಆರೋಪಿ ಸಂಖ್ಯೆ: 2 ಈತನು ನ್ಯಾಯಾಲಯಕ್ಕೆ ಹಾಜರಾಗಿದ್ದಾನೆ. ಮೊದಲ ನೋಟದಲ್ಲೇ, ಈ ನ್ಯಾಯಾಲಯ ನಿಂದನೆ ಅರ್ಜಿಯು, ನ್ಯಾಯಾಲಯಗಳ ನಿಂದನೆ ಅಧಿನಿಯಮ 1971ರ 20ನೇ ಪ್ರಕರಣದ ಮೇರೆಗೆ ಕಾಲಪರಿಮಿತಿಯಿಂದ ಪ್ರತಿಷೇಧಿತ ಅರ್ಜಿಯಾಗಿದೆ ಎಂದು ನಮಗೆ ಕಂಡುಬಂದಿದೆ. ಆದಾಗ್ಯೂ, ಫಿರ್ಯಾದಿ ಪರ ಮಾನ್ಯ ನ್ಯಾಯವಾದಿಯು ಒಂದು ವಾರದ ಕಾಲಾವಧಿಗಾಗಿ ಕೋರಿದ್ದರು. ತದನುಸಾರವಾಗಿ, ದಿನಾಂಕ: 17.03.2016ರಂದು ಮೊಕದ್ದಮೆಯನ್ನು ದಾಖಲಿಸಲಾಗಿದೆ".

4. ಫಿರ್ಯಾದಿ ಪರ ಮಾನ್ಯ ನ್ಯಾಯವಾದಿಗಳು ಸಾರ್ವಜನಿಕ ಮಾಹಿತಿ ಅಧಿಕಾರಿ, ನಗರ ಸಭೆ, ಕೊಪ್ಪಳ ಇವರು ಫಿರ್ಯಾದುದಾರನಿಗೆ ಕಳುಹಿಸಿದ ದಿನಾಂಕ: 13.12.2013ರ ಪತ್ರವನ್ನು ಉಲ್ಲೇಖಿಸಿ, ಸಾರ್ವಜನಿಕ ರಸ್ತೆಯನ್ನು ವಿಸ್ತರಿಸುವ ಉದ್ದೇಶಕ್ಕಾಗಿ ಫಿರ್ಯಾದುದಾರನ ಕಟ್ಟಡವನ್ನು ಆರೋಪಿಯು ಕೆಡವಿದಾಗ, ದಿನಾಂಕ: 17.11.2012ರಂದು ನ್ಯಾಯಾಲಯ ನಿಂದನೆ ಕೃತ್ಯವನ್ನು ಎಸಗಿದ್ದಾರೆ ಎಂದು ನಿವೇದಿಸಿಕೊಂಡಿದ್ದಾರೆ.

5. ಫಿರ್ಯಾದಿ ಪರ ಮಾನ್ಯ ನ್ಯಾಯವಾದಿಗಳು, ತಮ್ಮ ವಾದಕ್ಕೆ ಪೂರಕವಾಗಿ ನ್ಯಾಯಾಲಯಗಳ ನಿಂದನೆ ಅಧಿನಿಯಮ, 1971ರ (ಸಂಕ್ಷಿಪ್ತವಾಗಿ ಅಧಿನಿಯಮ) 20ನೇ ಪ್ರಕರಣವು, ಉಚ್ಚ ನ್ಯಾಯಾಲಯದ ನಿಂದನೆಯ ಮೊಕದ್ದಮೆಗಳಲ್ಲಿ ಅನ್ವಯವಾಗುವುದಿಲ್ಲವೆಂದು ಹೇಳಿ, ***ಮೆ// ಎ.ವಿ. ಕೌದಿ ಮತ್ತು ಕಂಪನಿ – ವಿರುದ್ಧ– ಆರ್.ವಿ. ಲಕ್ಷ್ಮಿದೇವಮ್ಮ*** (ಐ.ಎಲ್.ಆರ್. 1990 ಕೆಎಆರ್ 4355) ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ಪೂರ್ಣ ಪೀಠದ ನಿರ್ಣಯವನ್ನು ಅವಲಂಬಿಸಿದ್ದಾರೆ. ***ಪಲ್ಲವ್ ಸೇಠ್ –ವಿರುದ್ಧ– ಅಭಿರಕ್ಷಕ*** [(2001) 7 ಎಸ್‌ಸಿಸಿ 549] ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ನಿರ್ಣಯದ ಕಡೆಗೂ ಸಹ ಅವರು ನಮ್ಮ ಗಮನವನ್ನು ಸೆಳೆದಿದ್ದಾರೆ.

6. ಮೇಲೆ ಹೇಳಿದಂತೆ, ದಿನಾಂಕ: 17.11.2012ರಂದು ಆರೋಪಿಯು ನ್ಯಾಯಾಲಯ ನಿಂದನೆಯನ್ನು ಮಾಡಿರುವನೆಂದು ಆರೋಪಿಸಲಾಗಿದೆ. ಈ ನ್ಯಾಯಾಲಯ ನಿಂದನೆ ಅರ್ಜಿಯನ್ನು ದಿನಾಂಕ: 1.6.2015ರಂದು ಈ ನ್ಯಾಯಾಲಯದ ಮುಂದೆ ಮಂಡಿಸಲಾಗಿತ್ತು.

7. ಈ ಪ್ರಶ್ನೆಯನ್ನು ಎತ್ತಿದ ಈ ಸಂದರ್ಭದಲ್ಲಿ, ಅಧಿನಿಯಮದ 20ನೇ ಪ್ರಕರಣವನ್ನು ಪರಾಮರ್ಶಿಸುವುದು ಸೂಕ್ತವಾಗಿದೆ. ಅದನ್ನು ಈ ಕೆಳಗಿನಂತೆ ಓದಲಾಗಿದೆ:

> "20. **ನಿಂದನೆ ಕುರಿತ ಕ್ರಮಕ್ಕಾಗಿ ಕಾಲಪರಿಮಿತಿ:** ಯಾವುದೇ ನ್ಯಾಯಾಲಯವು, ನಿಂದನೆಯ ಯಾವುವೇ ವ್ಯವಹರಣೆಗಳನ್ನು ಸ್ವಯಂಪ್ರೇರಣೆಯಿಂದ ಆಗಲಿ ಅಥವಾ ಅನ್ಯಥಾ ರೀತಿಯಲ್ಲಾಗಲಿ, ನಿಂದನೆಯನ್ನು ಮಾಡಲಾಗಿದೆ ಎಂದು ಆಪಾದಿಸಿದ ದಿನಾಂಕದಿಂದ ಒಂದು ವರ್ಷದ ಅವಧಿ ಮುಕ್ತಾಯವಾದ ನಂತರ, ಪ್ರಾರಂಭಿಸತಕ್ಕದ್ದಲ್ಲ."

ಭಾರತ ಸಂವಿಧಾನದ 215ನೇ ಅನುಚ್ಛೇದವನ್ನು ಪರಾಮರ್ಶಿಸುವುದು ಸಹ ಸುಸಂಗತವಾದುದಾಗಿದ್ದು ಅದು ಈ ಮುಂದಿನಂತಿದೆ:

> "215. **ಉಚ್ಚ ನ್ಯಾಯಾಲಯಗಳು ದಾಖಲೆ ನ್ಯಾಯಾಲಯಗಳಾಗಿರುವುದು,–** ಪ್ರತಿಯೊಂದು ಉಚ್ಚ ನ್ಯಾಯಾಲಯವು, ದಾಖಲೆಯ ನ್ಯಾಯಾಲಯವಾಗಿರತಕ್ಕದ್ದು ಮತ್ತು ಸ್ವತಃ ನಿಂದನೆಗೆ ಶಿಕ್ಷೆ ನೀಡುವ ಅಧಿಕಾರವನ್ನು ಒಳಗೊಂಡು ಅಂಥ ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು.

8. ***ಎ.ವಿ. ಕೌದಿ ಮತ್ತು ಕಂಪನಿ*** (ಐ.ಎಲ್.ಆರ್. 1990 ಕೆಎಆರ್ 4355) ಮೊಕದ್ದಮೆಯಲ್ಲಿ, ಈ ನ್ಯಾಯಾಲಯದ ಪೂರ್ಣ ಪೀಠದ ಮುಂದೆ ಈ ಕೆಳಗಿನ ಪ್ರಶ್ನೆಯು ಪರಿಗಣನೆಗಾಗಿ ಉದ್ಭವಿಸಿದೆ:

> "ನ್ಯಾಯಾಲಯಗಳ ನಿಂದನೆ ಅಧಿನಿಯಮದ 20ನೇ ಪ್ರಕರಣದಲ್ಲಿ ಗೊತ್ತುಪಡಿಸಿದ ಒಂದು ವರ್ಷ ಕಾಲಾವಧಿಯು ಉಚ್ಚ ನ್ಯಾಯಾಲಯದ ನಿಂದನೆಗೆ ಸಂಬಂಧಿಸಿದಂತೆ, ಸಂವಿಧಾನದ 215ನೇ ಅನುಚ್ಛೇದದ ಅಡಿಯಲ್ಲಿನ ನಿಂದನೆ ವ್ಯವಹರಣೆಗಳಿಗೆ ಅನ್ವಯವಾಗುತ್ತದೆಯೇ?

ಪೂರ್ಣ ಪೀಠವು ಈ ಕೆಳಗಿನಂತೆ ಉತ್ತರಿಸಿದೆ:

> "15. ...................... ಆದ್ದರಿಂದ, ನ್ಯಾಯಾಲಯಗಳ ನಿಂದನೆ ಅಧಿನಿಯಮದ 20ನೇ ಪ್ರಕರಣದಲ್ಲಿನ ಒಂದು ವರ್ಷದ ಕಾಲಾವಧಿಯು, ಅಧೀನ ನ್ಯಾಯಾಲಯಗಳ ನಿಂದನೆ ಸಂಬಂಧದಲ್ಲಿ ಮಾತ್ರ ಅನ್ವಯವಾಗುತ್ತದೆ ಎಂಬುದು ನಮ್ಮ ನಿರ್ಣಯವಾಗಿದೆ. ಉಚ್ಚ ನ್ಯಾಯಾಲಯದ ನಿಂದನೆಯ ಮೊಕದ್ದಮೆಗಳಲ್ಲಿ ಅನ್ವಯವಾಗುವುದಿಲ್ಲ; ಭಾರತ ಸಂವಿಧಾನದ 215ನೇ ಅನುಚ್ಛೇದದ ಅಡಿಯಲ್ಲಿ ಈ ಪ್ರದತ್ತವಾದ ಅಧಿಕಾರವು ನಿರುಪಾಧಿಕವಾದುದಾಗಿದೆ ಮತ್ತು ಅನಿರ್ಬಂಧಿತವಾದುದಾಗಿದೆ. ಪ್ರಸ್ತುತ ಮೊಕದ್ದಮೆಯಲ್ಲಿ, ವಿಳಂಬದ ಕಾರಣದಿಂದಾಗಿ ನ್ಯಾಯಾಲಯವು ಕ್ರಮ ತೆಗೆದುಕೊಳ್ಳಲು ನಿರಾಕರಿಸಬಹುದಾದರೂ, ಅದರ ಅಧಿಕಾರ ವ್ಯಾಪ್ತಿ ಮತ್ತು 'ನ್ಯಾಯ' ವಿವೇಚನೆಯು ಚಲಾವಣೆಯಲ್ಲಿದೆ.

ಸರ್ವೋಚ್ಚ ನ್ಯಾಯಾಲಯವು, ***ಪಲ್ಲವ್ ಸೇಠ್*** [(2001) 7 ಎಸ್‌ಸಿಸಿ 549] ಮೊಕದ್ದಮೆಯಲ್ಲಿ ಅಧಿನಿಯಮದ 20ನೇ ಪ್ರಕರಣವನ್ನು ಈ ಮುಂದಿನಂತೆ ಅರ್ಥೈಸಿದೆ:

> "30. ಈ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯಗಳೆರಡೂ ದಾಖಲೆ ನ್ಯಾಯಾಲಯಗಳು ಮತ್ತು ಸಂವಿಧಾನವು ನಿಂದನೆಗೆ ಶಿಕ್ಷೆ ಕೊಡುವ ಅಧಿಕಾರಗಳನ್ನು ಅವುಗಳಿಗೆ ನೀಡಿದೆ ಎಂಬುದರ ಬಗ್ಗೆ ಯಾವುವೇ ಸಂಶಯವಿರುವುದಿಲ್ಲ. ಈ ಅಧಿಕಾರವನ್ನು ರದ್ದುಮಾಡಲಾಗುವುದಿಲ್ಲ ಅಥವಾ ನಿರರ್ಥಕಗೊಳಿಸಲಾಗುವುದಿಲ್ಲ ಎಂದು ಈ ನ್ಯಾಯಾಲಯದ ತೀರ್ಮಾನಗಳು ಸ್ಪಷ್ಟವಾಗಿ ತೋರಿಸುತ್ತವೆ. ಆದರೆ, 129ನೇ ಅನುಚ್ಛೇದ ಮತ್ತು 215ನೇ ಅನುಚ್ಛೇದದ ಅಡಿಯಲ್ಲಿನ ಅಧಿಕಾರವು ನಿರುಪಾಧಿಕವಾಗಿದ್ದರೆ,

ಆ ಅಧಿಕಾರವನ್ನು ಚಲಾಯಿಸಬಹುದಾದ ರೀತಿಯನ್ನು ಮತ್ತು ವ್ಯಾಪ್ತಿಯನ್ನು ಸೂಚಿಸುವ ಯಾವುದೇ ಕಾನೂನು ಇದೆಯೇ? 129ನೇ ಅನುಚ್ಛೇದದ ಮತ್ತು / ಅಥವಾ 215ನೇ ಅನುಚ್ಛೇದಗಳ ಅಡಿಯಲ್ಲಿನ ಅಧಿಕಾರವನ್ನು ಯಾವುದಾದರೂ ರದ್ದುಗೊಳಿಸುವ ಅಥವಾ ನಿರರ್ಥಕಗೊಳಿಸುವ ಕಾನೂನಿನ ಯಾವುದೇ ಉಪಬಂಧವಿದ್ದರೆ, ಅಂಥ ಕಾನೂನನ್ನು ಸಿಂಧುವಾಗಿ ಅಧಿನಿಯಮಿತಗೊಳಿಸಿರುವುದಿಲ್ಲ ಎಂಬುದನ್ನು ಪರಿಗಣಿಸಲಾಗುವುದಿಲ್ಲ ಎಂಬ ಚಿಕ್ಕ ಅನುಮಾನ ಇರಲು ಸಾಧ್ಯವಿಲ್ಲ. ಆದಾಗ್ಯೂ ಶಿಕ್ಷೆಯ ಪ್ರಮಾಣವನ್ನು ಅಥವಾ ಯಾವುದನ್ನು ನಿಂದನೆಯ ಕೃತ್ಯ ಎಂದು ಪರಿಗಣಿಸಬಹುದು ಅಥವಾ ಪರಿಗಣಿಸಬಾರದು ಎಂಬುದಕ್ಕೆ ಉಪಬಂಧ ಕಲ್ಪಿಸಲು ಅಥವಾ ನಿಂದನೆಗೆ ಸಂಬಂಧಿಸಿದ ವ್ಯವಹರಣೆಗಳನ್ನು ಪ್ರಾರಂಭಿಸಲು ಇರುವ ಕಾಲಮಿತಿಗೆ ಉಪಬಂಧ ಕಲ್ಪಿಸಿದಾಗ್ಯೂ, 215ನೇ ಅನುಚ್ಛೇದದ ಅಡಿಯಲ್ಲಿ ನಿಂದನೆಯ ಅಧಿಕಾರ ವ್ಯಾಪ್ತಿಯನ್ನು ನಿರಾಕರಿಸುವುದಿಲ್ಲ. ರದ್ದುಪಡಿಸುವ ಅಥವಾ ನಿರರ್ಥಕಗೊಳಿಸುವ ಉಪಬಂಧವೆಂದು ತೆಗೆದುಕೊಳ್ಳಲಾಗುವುದಿಲ್ಲ ಎಂಬುದು ನಮಗೆ ಕಂಡುಬರುತ್ತದೆ.

31. ಈ ನ್ಯಾಯಾಲಯವು ನಿರುಪಾಧಿಕ ಅಥವಾ ಅನಿರ್ಬಂಧಿತ ಅಧಿಕಾರ ನೀಡುವುದು ಅಥವಾ ಅಂಥ ಅಧಿಕಾರದ ಅಸ್ತಿತ್ವದ ಬಗ್ಗೆ ಸದಾ ಅಸಮ್ಮತಿಯನ್ನು ಸೂಚಿಸಿದೆ. ಶಾಸನಸಭೆಯು ಅಧಿನಿಯಮಿತಗೊಳಿಸಿದ ಯಾವುದೇ ಶಾಸನವಿದ್ದರೆ, ಅದನ್ನು 226ನೇ ಅನುಚ್ಛೇದದ ಅಡಿಯಲ್ಲಿನ ಅಧಿಕಾರದಂತೆ ಅಥವಾ ಅಧಿಕಾರ ವ್ಯಾಪ್ತಿಯನ್ನು ಅನುಚ್ಛೇದದ ಕಾನೂನಿಗನುಸಾರವಾಗಿ ಚಲಾಯಿಸಬೇಕೆಂಬಂತೆಯೇ, 129ನೇ ಅನುಚ್ಛೇದ ಮತ್ತು 215ನೇ ಅನುಚ್ಛೇದಗಳ ಅಡಿಯಲ್ಲಿನ ಅಧಿಕಾರವನ್ನು ಸಿಂಧುವಾಗಿ ಅಧಿನಿಯಮಿತಗೊಳಿಸಿದ ಉಪಬಂಧಗಳಿಗೆ ಅನುಗುಣವಾಗಿ

ಚಲಾಯಿಸಬೇಕು ಎಂಬುದು ಸ್ಪಷ್ಟವಾಗಿದೆ. ಸ್ಪಷ್ಟ ಅಥವಾ ಉಪಬಂಧಗಳು ತದ್ವಿರುದ್ಧವಾಗದ ಸಂಭವವಿರುವ ಸಂದರ್ಭದಲ್ಲಿ ಅವುಗಳನ್ನು ಸಾಮರಸ್ಯ ಪೂರ್ಣವಾಗಿ ಅರ್ಥೈಸತಕ್ಕದ್ದು.

32. ನ್ಯಾಯಾಲಯಗಳ ನಿಂದನೆ ಅಧಿನಿಯಮ, 1971 ಇದು, ಇತರ ವಿಷಯಗಳ ಜೊತೆಗೆ, ಯಾವುದನ್ನು ನಿಂದನೆಯ ವಿಷಯವನ್ನಾಗಿ ಪರಿಗಣಿಸಬಾರದೆಂಬುದಕ್ಕೆ ಉಪಬಂಧ ಕಲ್ಪಿಸುತ್ತದೆ; ಇದು ನಿರ್ದಿಷ್ಟಪಡಿಸುವ 12ನೇ ಪ್ರಕರಣದ ಅಡಿಯಲ್ಲಿ ವಿಧಿಸಬಹುದಾದ ಗರಿಷ್ಠ ಶಿಕ್ಷೆಯನ್ನು ನಿರ್ದಿಷ್ಟಪಡಿಸುತ್ತದೆ; ನಿಂದನೆಯು ಸರ್ವೋಚ್ಚ ನ್ಯಾಯಾಲಯದ ಅಥವಾ ಉಚ್ಚ ನ್ಯಾಯಾಲಯದ ಮುಂದಿರುವಲ್ಲಿ ಅನುಸರಿಸಬೇಕಾದ ಕಾರ್ಯವಿಧಾನವನ್ನು ಅಥವಾ ಇತರ ಮೊಕದ್ದಮೆಗಳಲ್ಲಿ ಕ್ರಿಮಿನಲ್ ನಿಂದನೆಯ ಸಂಜ್ಞಾನವನ್ನು 14ನೇ ಮತ್ತು 15ನೇ ಪ್ರಕರಣಗಳು ಉಪಬಂಧಿಸುತ್ತವೆ; ಸಂಜ್ಞಾನ ತೆಗೆದುಕೊಂಡ ನಂತರ ಅನುಸರಿಸಬೇಕಾದ ಕಾರ್ಯವಿಧಾನವನ್ನು 17ನೇ ಪ್ರಕರಣದಲ್ಲಿ ಉಪಬಂಧಿಸಲಾಗಿದೆ. 18ನೇ ಪ್ರಕರಣವು, 15ನೇ ಪ್ರಕರಣದ ಅಡಿಯಲ್ಲಿನ ಅಪರಾಧ ನಿಂದನೆಯ ಪ್ರತಿಯೊಂದು ಮೊಕದ್ದಮೆಯಲ್ಲಿ, ಅದನ್ನು ಇಬ್ಬರು ನ್ಯಾಯಾಧೀಶರಿಗಿಂತ ಕಡಿಮೆ ಇರದ ಪೀಠವು ಆಲಿಸಬೇಕೆಂದು ಮತ್ತು ನಿರ್ಧರಿಸಬೇಕೆಂದು ಉಪಬಂಧ ಕಲ್ಪಿಸುತ್ತದೆ. 19ನೇ ಪ್ರಕರಣವು ನಿಂದನೆಗಾಗಿ ಶಿಕ್ಷಿಸುವ ಉಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿ ಅದರ ಯಾವುದೇ ಆದೇಶದಿಂದ ಅಥವಾ ತೀರ್ಮಾನದಿಂದ ಬಾಧಿತರಾದವರಿಗೆ ಅಪೀಲಿನ ಹಕ್ಕನ್ನು ನೀಡುತ್ತದೆ; ಸಂವಿಧಾನದ ಯಾವುವೇ ಉಪಬಂಧಗಳನ್ನು ಉಲ್ಲಂಘಿಸುವ ಅಥವಾ ಅವುಗಳೊಂದಿಗೆ ಸಂಘರ್ಷ ಹೊಂದುವ, ಅಧಿನಿಯಮದ ಯಾವುವೇ ಉಪಬಂಧಗಳ ಸಿಂಧುತ್ವಕ್ಕೆ ಯಾವುದೇ ಆಕ್ಷೇಪಣೆ ಇರುವುದಿಲ್ಲ.

1971ರ ಅಧಿನಿಯಮವು ನಿಗದಿಪಡಿಸಿದ ಗರಿಷ್ಠ ಶಿಕ್ಷೆಯು ನ್ಯಾಯಾಲಯಕ್ಕೆ ಬಂಧನಕಾರಿಯೇ ಎಂಬ ಪ್ರಶ್ನೆ ಕುರಿತು ಈ ನ್ಯಾಯಾಲಯವು, ಯಾವುದೇ ಅಭಿಪ್ರಾಯವನ್ನು ವ್ಯಕ್ತಪಡಿಸದಿರುವ ಸರ್ವೋಚ್ಚ ನ್ಯಾಯಾಲಯ ವಕೀಲರ ಪರಿಷತ್ತಿನ ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ಅಭಿಪ್ರಾಯಗಳನ್ನು ಪರಿಗಣಿಸದೆ, 1971ರ ಅಧಿನಿಯಮದ ಯಾವುದೇ ಉಪಬಂಧದ ಸಿಂಧುತ್ವದ ಬಗ್ಗೆ ಯಾವ ಸಂಶಯವನ್ನು ವ್ಯಕ್ತಿಪಡಿಸಲಾಗಲಿಲ್ಲ. ಈ ನ್ಯಾಯಾಲಯವು, ಅದರ ಸಂವಿಧಾನದ ಅಧಿಕಾರವನ್ನು, ಚಲಾಯಿಸಿ, ಮತ್ತೊಂದು ಕಡೆಯಲ್ಲಿ, ಸಂವಿಧಾನದ 129ನೇ ಅನುಚ್ಛೇದದ ಅಥವಾ 215ನೇ ಅನುಚ್ಛೇದದ ಅಡಿಯಲ್ಲಿ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವಾಗ, ಅಧಿನಿಯಮದ ಉಪಬಂಧಗಳನ್ನು ಅನ್ವಯಿಸಿತು. ಸುಖದೇವ್ ಸಿಂಗ್ ಸೋದಿ ಮೊಕದ್ದಮೆಯಲ್ಲಿ, 1926ರ ಅಧಿನಿಯಮವು ವಿಧಿಸಬಹುದಾದ ಶಿಕ್ಷೆಯ ಪ್ರಮಾಣದ ಮೇಲೆ ಮಿತಿಯನ್ನು ಹೇರಿದೆ ಎಂದು ಗುರುತಿಸಲಾಯಿತು. ಬರದಕಾಂತ ಮಿಶ್ರ ಮೊಕದ್ದಮೆಯಲ್ಲಿ 1971ರ ಅಧಿನಿಯಮದ 19ನೇ ಪ್ರಕರಣದ ಅರ್ಥವಿವರಣೆ ಕುರಿತು ನಿರ್ಧರಿಸಲಾಯಿತು. ಎಂದರೆ, ನ್ಯಾಯಾಲಯವು ಕ್ರಮ ತೆಗೆದುಕೊಳ್ಳದಿದ್ದರೆ ಅಥವಾ ನಿಂದನಾ ವ್ಯವಹರಣೆಗಳನ್ನು ಪ್ರಾರಂಭಿಸದಿದ್ದರೆ ಅಪೀಲು ಸಲ್ಲಿಸುವ ಹಕ್ಕು ಇರಲಿಲ್ಲ. ಫರ್ಮ ಗಣಪತ್ ರಾಮ್ ರಾಜ್ ಕುಮಾರ್‌ರ ಮೊಕದ್ದಮೆಯಲ್ಲಿ 1971ರ ಅಧಿನಿಯಮದ 20ನೇ ಪ್ರಕರಣವು ಅನ್ವಯಿಸುವುದಿಲ್ಲವೆಂದು ನ್ಯಾಯಾಲಯವು ತೀರ್ಮಾನಿಸಿಲ್ಲ. ನ್ಯಾಯಾಲಯವು ನಿಂದನಾ ವ್ಯವಹರಣೆಗಳನ್ನು ಆರಂಭಿಸಲು ಅರ್ಜಿಯನ್ನು ಕಾಲ ಪರಿಮಿತಿಯೊಳಗೆ ಸಲ್ಲಿಸಿರಬೇಕು ಮತ್ತು ಪರಿಮಿತಿಯನ್ನು ಅರ್ಜಿಯನ್ನು ಸಲ್ಲಿಸಿದ ಪರಿಮಿತಿ ದಿನಾಂಕದ ಉದ್ದೇಶಕ್ಕೆ ಸುಸಂಗತವಾಗಿರುವಂತೆ ಲೆಕ್ಕಹಾಕಬೇಕು; ಇದಲ್ಲದೆ ಇದು ತಪ್ಪು ಮುಂದುವರಿಯುತ್ತಾ ಹೋಗುವ ಮೊಕದ್ದಮೆಯಾಗಿತ್ತೆಂದು

ನಿರ್ಣಯಕ್ಕೆ ಬರಲಾಗಿದೆ. ಕಾರ್ತಿಕ್ ಚಂದ್ರದಾಸ್ ಮೊಕದ್ದಮೆಯಲ್ಲಿ, ಪರಿಮಿತಿ ಅಧಿನಿಯಮದ ಉಪಬಂಧಗಳನ್ನು, ಪರಿಮಿತಿ ಅಧಿನಿಯಮದ 19ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಅಪೀಲಿನ ಸಂಬಂಧದಲ್ಲಿ 5ನೇ ಪ್ರಕರಣದ ಅಡಿಯಲ್ಲಿ ವ್ಯವಹರಿಸುವಲ್ಲಿ ಅನ್ವಯವಾಗಬೇಕೆಂದು ನಿರ್ಣಯಿಸಲಾಗಿದೆ. ನ್ಯಾಯಾಲಯಗಳ ನಿಂದನೆ ಅಧಿನಿಯಮ, 1971ರ ಮೂಲಕ ಉಪಬಂಧಿಸಿದ ಪ್ರಕ್ರಿಯೆಯನ್ನು ಸಂವಿಧಾನದ 215ನೇ ಅನುಚ್ಛೇದದ ಅಡಿಯಲ್ಲಿನ ಅಧಿಕಾರವ್ಯಾಪ್ತಿಯನ್ನು ಚಲಾಯಿಸುವಲ್ಲಿ ಸಹ ಅನುಸರಿಸಬೇಕಾಗುತ್ತದೆ. ಡಾ|| ಎಲ್.ಪಿ. ಮಿಶ್ರ ಮೊಕದ್ದಮೆಯಲ್ಲಿ ಮೂವರು ನ್ಯಾಯಾಧೀಶರ ಪೀಠವು ಅಭಿಪ್ರಾಯಪಟ್ಟಿದೆ. ಆದುದರಿಂದ, 20ನೇ ಪ್ರಕರಣವನ್ನು, 129ನೇ ಅನುಚ್ಛೇದದ ಅಥವಾ 215ನೇ ಅನುಚ್ಛೇದದ ಅಡಿಯಲ್ಲಿ ಅಧಿಕಾರಗಳನ್ನು ನಿರರ್ಥಕಗೊಳಿಸಿಲ್ಲವೆಂದು ಹಾಗೆ ಅರ್ಥೈಸಿದರೆ, ಆಗ ವಿಧಿಸಬಹುದಾದ ದಂಡನೆಯಷ್ಟರ ಮಟ್ಟಿಗೆ ಸಂಬಂಧಿಸಿದಂತೆ ನ್ಯಾಯಾಲಯಗಳ ನಿಂದನೆ ಅಧಿನಿಯಮದ ಇತರ ಉಪಬಂಧಗಳಂತೆ ಕಾಲ ಪರಿಮಿತಿಯ ಸೂಕ್ತ ಅವಧಿಯನ್ನು ಸಹ ಉಪಬಂಧಿಸಬಹುದಾಗಿದೆ.

33. 1971ರ ಅಧಿನಿಯಮದ 20ನೇ ಪ್ರಕರಣದಲ್ಲಿ ಬರುವ ''ಯಾವುದೇ ನ್ಯಾಯಾಲಯವು ..................... ನಿಂದನೆಗಾಗಿ ಯಾವುವೇ ವ್ಯವಹರಣೆಗಳನ್ನು ಪ್ರಾರಂಭಿಸತಕ್ಕದ್ದಲ್ಲ''ಎಂಬ ಅಭಿವ್ಯಕ್ತಿಯ ಪ್ರಶ್ನೆಯು ನೇರವಾಗಿ ಉದ್ಭವಿಸುತ್ತದೆ. 20ನೇ ಪ್ರಕರಣವು, ಕ್ರಿಮಿನಲ್ ನಿಂದನೆಗೆ ಸಂಬಂಧಿಸಿದಂತೆ ಮಾತ್ರವಲ್ಲದೆ ಸಿವಿಲ್ ನಿಂದನೆಗೆ ಸಂಬಂಧಿಸಿದಂತೆ ಸಹ ವ್ಯವಹರಿಸುತ್ತದೆ. ಇದು ಉಚ್ಚ ನ್ಯಾಯಾಲಯದ ಅಥವಾ ಸರ್ವೋಚ್ಚ ನ್ಯಾಯಾಲಯದ ನಿಂದನೆಯ ಮೊಕದ್ದಮೆಗಳಿಗೆ ಮಾತ್ರವಲ್ಲದೆ, ಅಧೀನ ನ್ಯಾಯಾಲಯದ ನಿಂದನೆಯ

ಮೊಕದ್ದಮೆಯಲ್ಲಿ ಸಹ ಅನ್ವಯವಾಗುತ್ತದೆ. ಈ ಪ್ರತಿಯೊಂದು ಮೊಕದ್ದಮೆಯಲ್ಲಿ ಅನುಸರಿಸಬೇಕಾದ ಪ್ರಕ್ರಿಯೆಯು ಬೇರೆ ಬೇರೆಯಾಗಿರುತ್ತದೆ.

44. ನಿಂದನೆಗೆ ಸಂಬಂಧಿಸಿದಂತೆ ಅನುಸರಿಸುವ ಕ್ರಮವನ್ನು ಎರಡು ಪ್ರವರ್ಗಗಳಲ್ಲಿ ವಿಭಜಿಸಲಾಗಿದೆ. ಅವೆಂದರೆ– ನ್ಯಾಯಾಲಯದ ಸ್ವ–ಪ್ರೇರಣೆಯಿಂದ ಪ್ರಾರಂಭಿಸುವಂಥದ್ದು ಮತ್ತು ನ್ಯಾಯಾಲಯದ ಸ್ವ–ಪ್ರೇರಣೆ ಮೇಲಲ್ಲದೆ ಅನ್ಯಥಾ ಸಂದರ್ಭದಲ್ಲಿ ಪ್ರಾರಂಭಿಸುವಂಥದ್ದು. ಪ್ರತಿಯೊಂದು ಸಂದರ್ಭದಲ್ಲಿ ಪ್ರಾರಂಭಿಸುವ ವಿಧಾನವು ಅತ್ಯವಶ್ಯವಾಗಿ ಭಿನ್ನವಾಗಿರುತ್ತದೆ. ಸ್ವ–ಪ್ರೇರಣೆಯ ವ್ಯವಹರಣೆಗಳ ಸಂದರ್ಭದಲ್ಲಿ, ನ್ಯಾಯಾಲಯವು ನೋಟೀಸನ್ನು ನೀಡುವ ಮೂಲಕ ಸ್ವತಃ ಪ್ರಾರಂಭಿಸಬೇಕಾಗಿರುವುದು. ಇತರೇ ಸಂದರ್ಭಗಳಲ್ಲಿ, ವ್ಯವಹರಣೆಯನ್ನು ಅರ್ಜಿಯನ್ನು ಸಲ್ಲಿಸುವ ಪಕ್ಷಕಾರನು ಮಾತ್ರ ಪ್ರಾರಂಭಿಸಬಹುದು. ಆದ್ದರಿಂದ, ನಮ್ಮ ಅಭಿಪ್ರಾಯದಲ್ಲಿ, 20ನೇ ಪ್ರಕರಣದ ಮೇಲೆ ಇರಿಸಬೇಕಾದ ಅರ್ಥಾನ್ವಯವು, ನ್ಯಾಯಾಲಯ ನಿಂದನೆ ಮಾಡಲಾಗಿದೆಯೆಂದು ಆರೋಪಿಸಿದ ದಿನಾಂಕದಿಂದ ಒಂದು ವರ್ಷದ ಅವಧಿಯ ಒಳಗಾಗಿ ಅರ್ಜಿಯನ್ನು ಸಲ್ಲಿಸುವ ಮೂಲಕವಾಗಲಿ ಅಥವಾ ನ್ಯಾಯಾಲಯವು ಸ್ವ–ಪ್ರೇರಣೆಯಿಂದ ನೋಟೀಸನ್ನು ನೀಡುವ ಮೂಲಕವಾಗಲಿ ವ್ಯವಹರಣೆಯನ್ನು ಪ್ರಾರಂಭಿಸತಕ್ಕದ್ದು ಎಂಬುದಾಗಿದೆ.

(ಒತ್ತು ನೀಡಲಾಗಿದೆ)

9. ಮೇಲೆ ಉಲ್ಲೇಖಿಸಿದ ***ಪಲ್ಲವ್ ಸೇಠ್*** ಮೊಕದ್ದಮೆಯ ತೀರ್ಪಿನಿಂದ ಆಯ್ದು ತೆಗೆದುಕೊಂಡ ಸಾರಾಂಶದಲ್ಲಿ ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ಕಾನೂನಿನ ಹಿನ್ನೆಲೆಯಲ್ಲಿ ವಿಧಿಸಲ್ಪಟ್ಟ ***ಮೆ|| ಎ.ವಿ. ಕೌದಿ ಮತ್ತು ಕಂಪನಿ*** (ಐ.ಎಲ್.ಆರ್. 1990 ಕೆಎಆರ್ 4355) ಮೊಕದ್ದಮೆಯಲ್ಲಿ ಈ ನ್ಯಾಯಾಲಯವು

ವಿಧಿಸಿದ ಕಾನೂನನ್ನು ವ್ಯಕ್ತವಾಗಿಯೇ ರದ್ದುಗೊಳಿಸಲಾಗಿದೆ. ಅದಕ್ಕನುಸಾರವಾಗಿ, ನ್ಯಾಯಾಲಯಗಳ ನಿಂದನೆ ಅಧಿನಿಯಮ, 1971ರ ಅಡಿಯಲ್ಲಿನ ಅಥವಾ/ಮತ್ತು ಭಾರತ ಸಂವಿಧಾನದ 215ನೇ ಅನುಚ್ಛೇದದ ಅಡಿಯಲ್ಲಿನ ಕ್ರಮವನ್ನು ನ್ಯಾಯಾಲಯ ನಿಂದನೆಯನ್ನು ಆರೋಪಿಸಿದ ದಿನಾಂಕದಿಂದ ಒಂದು ವರ್ಷದ ಒಳಗೆ ಪ್ರಾರಂಭಿಸತಕ್ಕದ್ದು ಎಂದು ನಾವು ಅಭಿಪ್ರಾಯಪಡುತ್ತೇವೆ. ಅಧಿನಿಯಮದ 20ನೇ ಪ್ರಕರಣವು ಉಚ್ಚ ನ್ಯಾಯಾಲಯ ಮತ್ತು ಅಧೀನ ನ್ಯಾಯಾಲಯಗಳ ನಿಂದನೆಯ ಸಂಬಂಧದಲ್ಲಿನ ವ್ಯವಹರಣೆಗಳಿಗೆ ಅನ್ವಯವಾಗುತ್ತದೆ. ಈ ನ್ಯಾಯಾಲಯವು ನಿಂದನೆಯನ್ನು ಮಾಡಲಾಗಿದೆ ಎಂದು ಆರೋಪಿಸಿದ ದಿನಾಂಕದಿಂದ ಒಂದು ವರ್ಷ ಮುಕ್ತಾಯವಾದ ನಂತರ ಈ ನ್ಯಾಯಾಲಯ ನಿಂದನೆ ಅರ್ಜಿಯನ್ನು ಸಲ್ಲಿಸಿರುವುದರಿಂದ, ಇದನ್ನು ನ್ಯಾಯಾಲಯಗಳ ನಿಂದನೆ ಅಧಿನಿಯಮ 1971ರ 20ನೇ ಪ್ರಕರಣದ ಅಡಿಯಲ್ಲಿ ಕಾಲ ಪರಿಮಿತಿ ಮೂಲಕ ಪ್ರತಿಬಂಧಿಸಲಾಗಿದೆ ಮತ್ತು ಹಾಗಾಗಿ, ಇದನ್ನು ವಜಾಗೊಳಿಸಲಾಗಿದೆ. ಅರ್ಜಿಯನ್ನು ವಜಾಗೊಳಿಸಿದ ಹಿನ್ನೆಲೆಯಲ್ಲಿ ಐ.ಎ.ಸಂ:1/2016 ಸಹ ವಜಾಗೊಂಡಿದೆ.

ಸಿಸಿಸಿ ಯನ್ನು ವಜಾಗೊಳಿಸಲಾಗಿದೆ.